ದೂರವಾಣಿ ಸಂಖ್ಯೆ: 080-22212343
ಫ್ಯಾಕ್ಸ್ ಸಂಖ್ಯೆ: 080-22278803
ಅಂತರ್ಜಾಲ: www.kptcl.com
ಇ-ಮೇಲ್ ವಿಳಾಸ: director.ahr.kptcl@gmail.com

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

Corporate Identity Number (CIN): U40109KA1999SGC025521

**ಕಂಪನಿಯ ಅಧಿಕೃತ ಕಚೇರಿ:** ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು-560 009.

**ಸಂಖ್ಯೆ: ಕವಿಪ್ರನಿನಿ/ಬಿ16/ಕೆಇಎನ್‌ಡಿಸಿಪಿಎಸ್//ಬಿ93/36012/2019-20** **ದಿನಾಂಕ:** 31 OCT 2019

## ಸುತ್ತೋಲೆ

**ವಿಷಯ:** ನೂತನ ವ್ಯಾಖ್ಯಾನಿತ ಅಂಶದಾಯಿ ಕೊಡುಗೆ ಪಿಂಚಣಿ ಯೋಜನೆಯ ವ್ಯಾಪ್ತಿಗೆ ಬರುವ ನಿಗಮದ ನೌಕರರು ಸೇವೆಯಿಂದ ವಜಾಗೊಂಡ ಸಂದರ್ಭದಲ್ಲಿ ಅವರ ಪಿಪಿಎವಿನ್ ಖಾತೆಯಲ್ಲಿರುವ ಮೊತ್ತವನ್ನು ಇತ್ಯರ್ಥ ಪಡಿಸುವ ಬಗ್ಗೆ.

**ಉಲ್ಲೇಖ:**
1. ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ (ಎಸ್‌ಪಿಎಲ್) 04 ಪಿಇಟಿ 2005, ದಿನಾಂಕ: 31.03.2006.
2. ಕವಿಪ್ರನಿನಿ ಆದೇಶ ಸಂಖ್ಯೆ: ಕವಿಪ್ರನಿನಿ/ಬಿ16/ಬಿ14/4977/2005-06 ದಿನಾಂಕ: 05.07.2007.
3. ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ (ಎಸ್‌ಪಿಎಲ್) 203 ಪಿಇಎನ್ 2012(ಪಿ) ದಿನಾಂಕ: 18.05.2016.
4. ಕರ್ನಾಟಕ ಸರ್ಕಾರದ ಸುತ್ತೋಲೆ ಸಂಖ್ಯೆ: ಆಇ(ವಿ)94 ಪಿಇಎನ್ 2016 ದಿನಾಂಕ: 27.05.2019.
5. ಕವಿಪ್ರನಿನಿ ಆದೇಶ ಸಂಖ್ಯೆ: ಕವಿಪ್ರನಿನಿ/ಬಿ16/ಕೆಇಎನ್‌ಡಿಸಿಪಿಎಸ್‌ಸಿ/ಬಿ93/ 36012/2018-19 ದಿನಾಂಕ: 19.07.2019.

***

ಕವಿಪ್ರನಿನಿ ಹಾಗೂ ವಿವಿಧ ವಿದ್ಯುತ್ ಸರಬರಾಜು ಕಂಪನಿಗಳ ಸೇವೆಗೆ ದಿನಾಂಕ: 01.04.2006 ರಂದು ಅಥವಾ ತರುವಾಯ ಸೇರುವ ಎಲ್ಲಾ ನೌಕರರಿಗೆ ಉಲ್ಲೇಖ (1) ರಲ್ಲಿ ಜಾರಿಗೊಳಿಸಿರುವ ಹೊಸ ವ್ಯಾಖ್ಯಾನಿತ ಅಂಶದಾಯಿ ಕೊಡುಗೆ ವಿಶ್ರಾಂತಿ ವೇತನ ಯೋಜನೆಯನ್ನು ನಿಗಮದಲ್ಲಿಯೂ ಸಹ ಉಲ್ಲೇಖ (2) ರ ಆದೇಶದ ಮೂಲಕ ಅಳವಡಿಸಿಕೊಳ್ಳಲಾಗಿರುತ್ತದೆ ಹಾಗೂ ಸದರಿ ಯೋಜನೆಗೆ ಸಂಬಂಧಿಸಿದಂತೆ, ಸರ್ಕಾರದಿಂದ ಕಾಲಕಾಲಕ್ಕೆ ಹೊರಡಿಸಲಾದ ಆದೇಶಗಳನ್ನು ನಿಗಮದಲ್ಲಿಯೂ ಸಹ ಅಳವಡಿಸಿಕೊಳ್ಳಲಾಗುತ್ತಿದೆ.

ಪ್ರಸ್ತುತ, ಕರ್ನಾಟಕ ಸರ್ಕಾರದ ಉಲ್ಲೇಖ (4) ರ ಸುತ್ತೋಲೆಯಲ್ಲಿ, ನೂತನ ಪಿಂಚಣಿ ಯೋಜನೆಯಡಿಯಲ್ಲಿನ ನೌಕರರು ಸೇವೆಯಿಂದ ವಜಾಗೊಂಡ ಸಂದರ್ಭದಲ್ಲಿ ನೌಕರರ (ಪಿಆರ್‌ಎಎನ್) ಖಾತೆಯಲ್ಲಿರುವ ವಂತಿಗೆ ಮೊತ್ತ ಮತ್ತು ಅದರ ಮೇಲಿನ ಆದಾಯವನ್ನು ಮಾತ್ರ ನೌಕರರಿಗೆ/ವಜಾಗೊಂಡ ನೌಕರರು ಮೃತ ಪಟ್ಟಿದ್ದಲ್ಲಿ ಅವರ ನಾಮನಿರ್ದೇಶಿತರಿಗೆ/ಕುಟುಂಬದವರಿಗೆ ಇತ್ಯರ್ಥ ಪಡಿಸತಕ್ಕದ್ದು ಹಾಗೂ ಪಿಆರ್‌ಎಎನ್ ಖಾತೆಯಲ್ಲಿರುವ ಸರ್ಕಾರದ ವಂತಿಗೆ ಮೊತ್ತ ಮತ್ತು ಅದರ ಮೇಲಿನ ಆದಾಯವನ್ನು ಸರ್ಕಾರದ ಲೆಕ್ಕಶೀರ್ಷಿಕೆಗೆ ಜಮೆ ತೆಗೆದುಕೊಳ್ಳತಕ್ಕದ್ದು ಎಂದು ತಿಳಿಸಲಾಗಿದೆ.

ಸರ್ಕಾರವು ಹೊರಡಿಸಿರುವ ದಿನಾಂಕ: 27.05.2019ರ ಸುತ್ತೋಲೆಯಲ್ಲಿನ ಅಂಶಗಳನ್ನು ಪರಿಗಣಿಸಿ ನಿಗಮದಲ್ಲಿಯೂ ನೂತನ ವ್ಯಾಖ್ಯಾನಿತ ಅಂಶದಾಯಿ ಕೊಡುಗೆ ಪಿಂಚಣಿ ಯೋಜನೆಗೆ ಒಳಪಡುವ ಕವಿಪ್ರನಿನಿ ಹಾಗೂ ಎಲ್ಲಾ ಎಸ್ಕಾಂಗಳ ಅಧಿಕಾರಿ/ನೌಕರರು ಸೇವೆಯಿಂದ ವಜಾಗೊಂಡ ಸಂದರ್ಭದಲ್ಲಿ, ಪಿಪಿಎವಿನ್ ಖಾತೆಯಲ್ಲಿರುವ ಅಧಿಕಾರಿ/ನೌಕರನ ಭಾಗದ ಪಿಂಚಣಿ ವಂತಿಗೆಯ ಕ್ರೋಢೀಕೃತ ಮೊತ್ತ ಮತ್ತು ಅದರ ಮೇಲೆ ಗಳಿಸಲಾದ ಆದಾಯವನ್ನು ಮಾತ್ರ ಅಧಿಕಾರಿ/ನೌಕರರಿಗೆ ಅಥವಾ ವಜಾಗೊಂಡ ಅಧಿಕಾರಿ/ನೌಕರರು ಮೃತ ಪಟ್ಟಿದ್ದಲ್ಲಿ ಅವರ ನಾಮನಿರ್ದೇಶಿತರಿಗೆ/ಕುಟುಂಬದವರಿಗೆ ಇತ್ಯರ್ಥ ಪಡಿಸತಕ್ಕದ್ದು ಹಾಗೂ ಪಿಪಿಎವಿನ್ ಖಾತೆಯಲ್ಲಿರುವ

ಉದ್ಯೋಗದಾತರ (Employer's portion) ಮೊತ್ತ ಮತ್ತು ಅದರ ಮೇಲಿನ ಆದಾಯವನ್ನು ನಿಗಮದ/ಎಸ್ಕಾಂಗಳ ಆದಾಯದ ಲೆಕ್ಕಕ್ಕೆ ಜಮೆ ಮಾಡಿಕೊಳ್ಳಲು ತಿಳಿಸಲಾಗಿದೆ.

ನಿರ್ದೇಶಕರು
(ಆಡಳಿತ ಮತ್ತು ಮಾನವ ಸಂಪನ್ಮೂಲ)

ಗೆ:

1. ವ್ಯವಸ್ಥಾಪಕ ನಿರ್ದೇಶಕರು, ಬೆಸ್ಕಾಂ/ಜೆಸ್ಕಾಂ/ಹೆಸ್ಕಾಂ/ಮೆಸ್ಕಾಂ/ಸೆಸ್ಕ್/ಪಿ.ಸಿ.ಕೆ.ಎಲ್.
2. ಎಲ್ಲಾ ನಿರ್ದೇಶಕರು(ತಾಂತ್ರಿಕ), ಎಸ್ಕಾಂಗಳು.
3. ಎಲ್ಲಾ ಆರ್ಥಿಕ ಸಲಹೆಗಾರರು, ಕವಿಪ್ರನಿನಿ/ಎಸ್ಕಾಂಗಳು.
4. ಎಲ್ಲಾ ಮುಖ್ಯ ಇಂಜನಿಯರ್(ವಿ), ಕವಿಪ್ರನಿನಿ/ಎಸ್ಕಾಂಗಳು.
5. ಹಿರಿಯ ಆಪ್ತ ಕಾರ್ಯದರ್ಶಿಗಳು, ವ್ಯವಸ್ಥಾಪಕ ನಿರ್ದೇಶಕರು/ನಿರ್ದೇಶಕರು (ಪ್ರಸರಣ)/ನಿರ್ದೇಶಕರು (ಹಣಕಾಸು)/ನಿರ್ದೇಶಕರು (ಆಡಳಿತ ಮತ್ತು ಮಾನವ ಸಂಪನ್ಮೂಲ), ಕವಿಪ್ರನಿನಿ.

www.kptcl.com/eprasarana for information of:

6. ಎಲ್ಲಾ ಅಧೀಕ್ಷಕ ಇಂಜನಿಯರ್ (ವಿ)/ನಿಯಂತ್ರಣಾಧಿಕಾರಿಗಳು, ಕವಿಪ್ರನಿನಿ/ಎಸ್ಕಾಂಗಳು.
7. ಎಲ್ಲಾ ಕಾರ್ಯನಿರ್ವಾಹಕ ಇಂಜನಿಯರ್ (ವಿ)/ಉಪ ಲೆಕ್ಕನಿಯಂತ್ರಣಾಧಿಕಾರಿಗಳು, ಕವಿಪ್ರನಿನಿ/ಎಸ್ಕಾಂಗಳು.
8. ಎಲ್ಲಾ ಅಧಿಕಾರಿಗಳು, ನಿಗಮ ಕಾರ್ಯಾಲಯ, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.

ಪ್ರತಿಯನ್ನು ಮಾಹಿತಿಗಾಗಿ ರವಾನಿಸಿದೆ:-

1. ಶ್ರೀ.ಟಿ.ಆರ್.ರಾಮಕೃಷ್ಣಯ್ಯ, ಅಧ್ಯಕ್ಷರು, ಕವಿಪ್ರನಿ ನೌಕರರ ಸಂಘ (ನೋಂದಣಿ ಸಂಖ್ಯೆ: 659), ಬೆಂಗಳೂರು ಮತ್ತು ನಿರ್ದೇಶಕರು, ಕವಿಪ್ರನಿನಿ ಹಾಗೂ ಎಲ್ಲಾ ಎಸ್ಕಾಂಗಳು.
2. ಶ್ರೀ.ಟಿ.ಎಂ.ಶಿವಪ್ರಕಾಶ್, ಅಧ್ಯಕ್ಷರು, ಕವಿಮಂ ಇಂಜನಿಯರ್‌ಗಳ ಸಂಘ, ಬೆಂಗಳೂರು, ಮತ್ತು ನಿರ್ದೇಶಕರು, ಕವಿಪ್ರನಿನಿ ಹಾಗೂ ಎಲ್ಲಾ ಎಸ್ಕಾಂಗಳು.
3. ಪ್ರಧಾನ ಕಾರ್ಯದರ್ಶಿ, ಕವಿಪ್ರನಿ ನೌಕರರ ಸಂಘ(ನೋಂದಣಿ ಸಂಖ್ಯೆ: 659), ಬೆಂಗಳೂರು.
4. ಪ್ರಧಾನ ಕಾರ್ಯದರ್ಶಿ, ಕವಿಮಂ ಇಂಜನಿಯರ್‌ಗಳ ಸಂಘ, ಬೆಂಗಳೂರು.
5. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ, ಲೆಕ್ಕಾಧಿಕಾರಿಗಳ ಸಂಘ, ಬೆಂಗಳೂರು.
6. ಪ್ರಧಾನ ಕಾರ್ಯದರ್ಶಿ, ಕವಿಮಂ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಸಂಸ್ಥೆ(ರಿ), ಬೆಂಗಳೂರು.
7. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ, ಡಿಪ್ಲೋಮಾ ಇಂಜನಿಯರ್‌ಗಳ ಸಂಘ, ಬೆಂಗಳೂರು.
8. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ/ಎಸ್ಕಾಂ ಪ.ಜಾ/ಪ.ಪಂ ಅಧಿಕಾರಿಗಳ ಸಂಘ, ಬೆಂಗಳೂರು.
9. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ, ಪಿಂಚಣಿದಾರರ ಸಂಘ, ಕಾವೇರಿ ಭವನ, ಬೆಂಗಳೂರು.